# ಪುಸ್ತಕ ಪರಿಚಯ

**SWAMI VIVEKANANDA BIBLIOGRAPHY**
ಸಂಕಲನ: ಡಾ.ಪ್ರಭುಶಂಕರ
ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು – ೫೭೦ ೦೦೬
ಪುಟಗಳು: ೧೭೬, ಬೆಲೆ: ೩.೦೦/-

ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಮೇರೆ ಇಲ್ಲದ ಕಡಲಿನಂತೆ ಇರುವುದು. ಅವರ ಭಾಷಣಗಳು, ಬರಹಗಳು ಮತ್ತು ಅವರ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ಹೊರಬಂದಿರುವ ಬರಹಗಳು, ಜೀವನಗ್ರಂಥಗಳು, ಸಂಶೋಧನಾ ಕೃತಿಗಳು ನೂರಾರು. ಹತ್ತು ಹಲವು ಕಡೆ ಹಂಚಿಹೋಗಿರುವ ಈ ವಿಶಾಲ ಸಾಹಿತ್ಯದ ವ್ಯವಸ್ಥಿತ ಅಧ್ಯಯನ ಸಾಧ್ಯವಾಗುವುದು, ಸಮರ್ಪಕವಾದ ಸೂಚಿಯಿಂದ ಮಾತ್ರ. ಆದರೆ ಅದನ್ನು ಸಿದ್ಧಪಡಿಸುವುದು ಬಹಳ ಕಷ್ಟ. ವಿದ್ವತ್ತಿನ ಜೊತೆಗೆ ಕಠಿಣ ಪರಿಶ್ರಮ ಹಾಗೂ ವಿಶ್ಲೇಷಣಾತ್ಮಕ ಬುದ್ಧಿ ಇದಕ್ಕೆ ಅವಶ್ಯಕ. ಇಂತಹ ಗುಣಗಳನ್ನು ಮೈಗೂಡಿಸಿಕೊಂಡವರು ಕನ್ನಡದ ಹಿರಿಯ ಸಾಹಿತಿ ಮತ್ತು ಸ್ವಾಮೀಜಿಯವರ ಕೃತಿಗಳ ಆಳ ಅಧ್ಯಯನ ಮಾಡಿದ ಧುರೀಣ ಡಾ.ಪ್ರಭುಶಂಕರ ಅವರು. ಅವರು ಸಂಪಾದಿಸಿರುವ SWAMI VIVEKANANDA BIBLIOGRAPHY ವಿವೇಕಾನಂದ ಅಧ್ಯಯನ ಕ್ಷೇತ್ರದಲ್ಲಿ ಒಂದು ಮೈಲುಗಲ್ಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದವರು ೧೯೭೬ರಲ್ಲಿ ಸ್ಥಾಪಿಸಿದ 'ವಿವೇಕಾನಂದ ಪೀಠ'ವನ್ನು ಪ್ರಥಮ ಬಾರಿಗೆ ಅಲಂಕರಿಸಿದ ಶ್ರೀಪ್ರಭುಶಂಕರ, ದೇಶದ ಹಲವಾರು ಗ್ರಂಥಾಲಯಗಳಿಗೆ ಭೇಟಿ ಕೊಟ್ಟು, ಆಕರಗಳನ್ನು ಸಂಗ್ರಹಿಸಿ, ಈ ಸೂಚಿಯನ್ನು ಸಂಪಾದಿಸಿದ್ದಾರೆ. ಇದರಲ್ಲಿ ಮೂರು ಭಾಗಗಳಿವೆ. ಪ್ರತಿಯೊಂದು ಭಾಗದಲ್ಲಿಯೂ ವಿಶೇಷಪದ ಅಥವಾ ವಿಷಯಗಳನ್ನು ವರ್ಣಾನುಕ್ರಮವಾಗಿ ಜೋಡಿಸಲಾಗಿದೆ. ಪ್ರತಿಯೊಂದಕ್ಕೂ, ಅದು ಬರುವ ಆಕರಗಳ ವಿವರಗಳನ್ನು ಕೊಡಲಾಗಿದೆ.

ಭಾಗ — ೧ರಲ್ಲಿ ೪೧೬ ವಿಶೇಷಪದ ಹಾಗೂ ವಿಷಯಗಳಿದ್ದು, ಪ್ರತಿಯಂದಕ್ಕೂ ಅವು ಕಾಣಬರುವ ಪುಸ್ತಕಗಳ ಸೂಚಿಯನ್ನು ಕೊಡಲಾಗಿದೆ. ಹಾಗೆಯೇ, ೨ನೆಯ ಭಾಗದಲ್ಲಿ ೩೬೫ ಪದ/ವಿಷಯಗಳಿಗೆ ಗ್ರಂಥಭಾಗಗಳು ಮತ್ತು ಸ್ಮರಣ ಸಂಚಿಕೆಗಳ ಸೂಚಿಯನ್ನೂ, ೩ನೆಯ ಭಾಗದಲ್ಲಿ ೨೧೩೩ ಪದ/ವಿಷಯಗಳಿಗೆ ನಿಯತಕಾಲಿಕೆಗಳ ಪಟ್ಟಿಯನ್ನೂ ಕೊಡಲಾಗಿದೆ. ಪ್ರತಿ ಭಾಗದಲ್ಲಿಯೂ, ಲೇಖಕರ ಮತ್ತು ವಿಶೇಷಪದ/ವಿಷಯಗಳ ಅನುಕ್ರಮಣಿಕೆ ಇದೆ.

ಸ್ವಾಮಿ ವಿವೇಕಾನಂದರ ಬಗ್ಗೆ ಅಧ್ಯಯನ ಅಥವಾ ಸಂಶೋಧನೆ ಮಾಡಬಯಸುವ ಆಸಕ್ತರಿಗೆಲ್ಲಾ ಇದು ಸಂಗ್ರಹಯೋಗ್ಯವಾಗಿರುವ ಗ್ರಂಥ. ಒಂದೇ ಕೊರತೆಯೆಂದರೆ, ಇಂಗ್ಲೀಷಿನಲ್ಲಿ ಪ್ರಕಟವಾಗಿರುವ ಸಾಹಿತ್ಯಕ್ಕೆ ಮಾತ್ರ ಈ ಸಂಕಲನ ಸೀಮಿತವಾಗಿರುವುದು.

ದೊಡ್ಡ ಆಕಾರದಲ್ಲಿ ಭವ್ಯವಾಗಿ ಮೂಡಿಬಂದಿರುವ ಈ ಪುಸ್ತಕ 'ಪ್ರಸಾರಾಂಗ'ದ ಒಂದು ಮಹತ್ವದ ಕಾಣಿಕೆಯಾಗಿದೆ.

— ಬ್ರ. ವಿವಿಕ್ತ ಚೈತನ್ಯ

**ಶ್ರೀ ಗೋಸ್ವಾಮಿ ತುಳಸೀದಾಸರ ಶ್ರೀರಾಮಚರಿತಮಾನಸ**
**(ಮಕರಂದ ಎಂಬ ಕನ್ನಡ ವ್ಯಾಖ್ಯಾನದೊಡನೆ)**
**೧೦ ಸಂಪುಟಗಳಲ್ಲಿ**
ವ್ಯಾಖ್ಯಾನಕಾರರು: ಡಾ. ಎಂ.ಕೆ. ಭಾರತೀರಮಣಾಚಾರ್ಯ
ಪ್ರಕಾಶಕರು:ಶ್ರುತಿ ಪ್ರಕಾಶನ 266/8,ಮೂರನೇ ಮುಖ್ಯರಸ್ತೆ
ಹನುಮಂತನಗರ ಬೆಂಗಳೂರು-೫೬೦ ೦೧೯

ಉತ್ತರಭಾರತದಲ್ಲಿ 'ರಾಮಾಯಣ'ವೆಂದರೆ, ಎಲ್ಲರ ಮನಸ್ಸಿಗೆ ಬರುವುದು ಶ್ರೀಗೋಸ್ವಾಮಿ ತುಳಸೀದಾಸರ ಶ್ರೀರಾಮಚರಿತ ಮಾನಸವೇ. ಅಲ್ಲಿನ ಕೋಟ್ಯಂತರ ಜನರು, ಕಳೆದ ೪೦೦ ವರ್ಷಗಳಿಂದ ರಾಮಕಥೆಯ ಸುಧಾಪಾನವನ್ನು ಸವಿದು ಧನ್ಯರಾಗುತ್ತಿರುವುದು ಈ ಪವಿತ್ರಗ್ರಂಥದ ಮೂಲಕವೇ. ಅಷ್ಟೊಂದು ಸುದೀರ್ಘ ಕಾಲಮಾನದಲ್ಲಿ, ವಿಶಾಲ ಜನಸಮುದಾಯವೊಂದರ ಸಂಸ್ಕೃತಿ, ಧರ್ಮ, ಆಚರಣೆ ಮತ್ತು ಸಾಹಿತ್ಯಗಳ ಮೇಲೆ ಗಾಢಪರಿಣಾಮ ಬೀರಿದ ಬೇರೊಂದು ಗ್ರಂಥ ಜಗತ್ತಿನ ಸಾಹಿತ್ಯಕ್ಷೇತ್ರದಲ್ಲಿ ಕಾಣಸಿಗದು.

ಮಾನಸವು ರಚಿತವಾಗಿರುವುದು ಹಿಂದಿಯ ಒಂದು ಉಪಭಾಷೆಯಾದ ಅವಧಿಯಲ್ಲಿ. ಇದನ್ನು ತುಳಸೀದಾಸರು ದೋಹಾ ಚವುಪಾ ಶೈಲಿಯಲ್ಲಿ ಬರೆದಿದ್ದಾರೆ. ಇದು ಸಂಸ್ಕೃತದ ಆಧ್ಯಾತ್ಮಿಕ ರಾಮಾಯಣವನ್ನು ಆಧಾರವಾಗಿ ಇಟ್ಟುಕೊಂಡದ್ದಾದರೂ, ಶ್ರೀ ತುಳಸೀದಾಸರ ರಾಮಭಕ್ತಿಯ ಭಾವಲಹರಿಯ ಮೇರು ಔನ್ನತ್ಯದ ಪರಾಕಾಷ್ಠೆಯನ್ನು ನಾವಿಲ್ಲಿ ಕಾಣಬಹುದಾಗಿದೆ, ಭಕ್ತಿಜಲದಲ್ಲಿ ಮಿಂದು ಧನ್ಯರಾಗಬಹುದಾಗಿದೆ.

ಇಂತಹ ಉದ್ಗ್ರಂಥದ ಕನ್ನಡ ವ್ಯಾಖ್ಯಾನವನ್ನು ಹತ್ತು ಬೃಹತ್ ಸಂಪುಟಗಳಲ್ಲಿ ಹಲವಾರು ವರ್ಷಗಳ ಕಠಿಣ ಪರಿಶ್ರಮದಿಂದ ಸಂಪನ್ನಗೊಳಿಸಿ, ಕನ್ನಡ ಜನತೆಯ ಮುಂದಿಟ್ಟಿದ್ದಾರೆ ಡಾ. ಎಂ.ಕೆ. ಭಾರತೀರಮಣಾಚಾರ್ಯರು. ಬನಾರಸ್ ಹಿಂದೂ ವಿಶ್ವ—

ವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು, ಹಿಂದೀ ಭಾಷೆಯಲ್ಲಿ ಅಗಾಧ ಪಾಂಡಿತ್ಯವುಳ್ಳವರಾಗಿದ್ದಾರೆ. ಕರ್ನಾಟಕದಲ್ಲಿ, ತಮ್ಮ ಇಡೀ ಜೀವನವನ್ನೇ ತುಳಸೀರಾಮಾಯಣದ ಅಧ್ಯಯನ-ಪ್ರವಚನಗಳಲ್ಲಿ ಕಳೆದ ಆಚಾರ್ಯರ ವಿದ್ವತ್ ತಪಸ್ಸಿನ ಫಲವೇ ಮಕರಂದವೆಂಬ ಈ ಸುದೀರ್ಘ ವ್ಯಾಖ್ಯಾನ.

ರಾಮಚರಿತಮಾನಸದ ಪ್ರತಿಯೊಂದು ಪದವನ್ನೂ, ಸಾಹಿತ್ಯಿಕವಾಗಿ, ತಾತ್ತ್ವಿಕವಾಗಿ ಮತ್ತು ಧಾರ್ಮಿಕವಾಗಿ ವಿಶ್ಲೇಷಿಸುವುದರ ಮೂಲಕ, ಕಾವ್ಯದ ಅಂತಃಸತ್ತ್ವವನ್ನು ಸ್ಫುಟಗೊಳಿಸುವ ಮಹಾನ್ ಕಾರ್ಯದಲ್ಲಿ ಆಚಾರ್ಯರು ಯಶಸ್ವಿಯಾಗಿದ್ದಾರೆ. ಪುಸ್ತಕದಲ್ಲಿ ಹಾರೈಕೆಕಾರರೊಬ್ಬರು ಬರೆದಿರುವಂತೆ, ಉತ್ತರ ಭಾರತದ ಪ್ರಖ್ಯಾತ ರಾಮಚರಿತಮಾನಸದಂತಹ ಜ್ಞಾನಗಂಗೆಯನ್ನು ದಕ್ಷಿಣಭಾರತಕ್ಕೆ, ವಿಶೇಷವಾಗಿ ಕನ್ನಡಕ್ಕೆ ಸಮರ್ಥವಾಗಿ, ಸಮಗ್ರವಾಗಿ ತಂದಿರುವ ಭಗೀರಥ ಪ್ರಯತ್ನ ಇದು.

— ಬ್ರ. ವಿವಿಕ್ತ ಚೈತನ್ಯ

**ಸಿದ್ಧಾಂತ ಶಿಖಾಮಣಿ**

**ಪೂಜ್ಯ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ ಪ್ರವಚನ ಸಾರಸಂಗ್ರಹ**

**ಲೇಖಕರು :** ಶ್ರೀ ಸಿದ್ಧೇಶ್ವರ ಸ್ವಾಮಿಗಳು.
**ಪ್ರಕಾಶಕರು :** ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ
ರಾಮಾನುಜ ರಸ್ತೆ, ಮೈಸೂರು ೫೭೦ ೦೦೪
**ಪುಟ:** ೮೬೯ +xvi, **ಬೆಲೆ:** ರೂ. ೧೫೦

ವೀರಶೈವ ಸಿದ್ಧಾಂತದ ಒಂದು ಮಹತ್ತ್ವಪೂರ್ಣವಾದ ಸಂಸ್ಕೃತ ಶಾಸ್ತ್ರಗ್ರಂಥ ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತ ವೀರಶೈವ ಸಿದ್ಧಾಂತ ಶಿಖಾಮಣಿ. ಈ ಗ್ರಂಥ ಕನ್ನಡದಲ್ಲಿ ಬೆಳಕು ಕಂಡದ್ದು ಸುಮಾರು ಎರಡು ದಶಕಗಳಿಗಿಂತ ಹಿಂದೆ. ಬಿಜಾಪುರದ ಪೂಜ್ಯ ಲಿಂಗೈಕ್ಯ ಶ್ರೀಮಲ್ಲಿಕಾರ್ಜುನ ಸ್ವಾಮಿಗಳು ಕೊಲ್ಲಾಪುರದಲ್ಲಿ ಈ ಗ್ರಂಥವನ್ನು ಕುರಿತು ನೀಡಿದ ಪ್ರವಚನಗಳ ಸಾರವನ್ನು ಸಂಗ್ರಹಿಸಿದವರು, ಪೂಜ್ಯ ಸ್ವಾಮೀಜಿಯವರ ಆಧ್ಯಾತ್ಮಿಕ ಮಾರ್ಗದರ್ಶನದಲ್ಲೇ ಸಾಧನೆಗೈದು ಸಾರ್ಥಕತೆಯನ್ನು ಪಡೆದಿರುವ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು. ತಮ್ಮ ಬದುಕು, ಚಿಂತನ, ಪ್ರವಚನಗಳಿಂದ ಅಸಂಖ್ಯ ಅಧ್ಯಾತ್ಮ ಸಾಧಕರಿಗೆ ಸ್ಫೂರ್ತಿಯಾಗಿರುವ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸಾಧಕವೃಂದದಲ್ಲಿ ಚಿರಪರಿಚಿತರು.

ಪ್ರಸ್ತುತ ಕೃತಿಯಲ್ಲಿ ವೀರಶೈವ ಸಿದ್ಧಾಂತದ ಅಡಿಗಲ್ಲಾದ ಷಟ್‌ಸ್ಥಲ ದರ್ಶನವನ್ನು ವಿಸ್ತೃತವಾಗಿ ಚರ್ಚಿಸಲಾಗಿದೆ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‌ಸ್ಥಲಗಳು ಹೇಗೆ ತಾತ್ತ್ವಿಕವಾದ ಒಂದು ಮತ ಸಿದ್ಧಾಂತವೋ ಹಾಗೆಯೇ ಒಂದು ಉಪಾಸನಾ ಮಾರ್ಗವೂ ಹೌದು. ವೀರಶೈವದ ಮುಖ್ಯಗುರಿ ಲಿಂಗಾಂಗ ಸಾಮರಸ್ಯ. ಶಕ್ತಿ-ವಿಶಿಷ್ಟ ಪರಶಿವನ ಸತ್-ಚಿತ್-ಆನಂದರೂಪರಾದ ಗುರು, ಲಿಂಗ, ಜಂಗಮರೇ ವೀರಶೈವ ಉಪಾಸನಾಮಾರ್ಗದಲ್ಲಿ ಉಪಾಸ್ಯಮೂರ್ತಿಗಳು. ಈ ಉಪಾಸನೆಯ ವಿವರಣೆಗಳು ನಮಗೆ ಮನೋಜ್ಞವಾಗಿ ದೊರೆಯುವುದು ಶಿವಶರಣರ ವಚನ ವಾಙ್ಮಯದಲ್ಲಿ. ಜೀವನದ ಅಂತಿಮ ಸಾಧನೆಗೆ ತಮ್ಮ ಬಾಳನ್ನೇ ಮುಡಿಪಾಗಿಟ್ಟ ಮಹಾನುಭಾವರಾದ ಶಿವಶರಣರ ವಚನಗಳನ್ನು ವಿಪುಲವಾಗಿ ಪ್ರಮಾಣವಾಗಿ ಉದ್ಧರಿಸಿರುವ ಈ ಕೃತಿಯಲ್ಲಿ ಶುಷ್ಕ ಸಿದ್ಧಾಂತಗಳಿಗಿಂತ ಭಿನ್ನವಾದ, ಬದುಕಿಗೆ ಹತ್ತಿರವಾದ ಒಂದು ಜೀವನ-ದರ್ಶನವನ್ನು ನಾವು ಕಾಣುತ್ತೇವೆ.

ಅನುಭಾವಿ ಚಿಂತಕರಾದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಒಳನೋಟಗಳು ಸಾಧಕರ ಹೃದಯದಲ್ಲಿ ಈ ಗ್ರಂಥವನ್ನು ಶಾಶ್ವತವಾಗಿ ಪ್ರತಿಷ್ಠಾಪಿಸುವಂತೆ ಮಾಡುತ್ತವೆ. ಆಧ್ಯಾತ್ಮಿಕ ಮಾರ್ಗದ ಸಾಧಕರಿಗೆ ಅಗತ್ಯವಾದ ಮಾರ್ಗದರ್ಶನ ಈ ಗ್ರಂಥದಲ್ಲಿದೆ.

ಗ್ರಂಥದ ಪಾರಾಯಣಕ್ಕೆ ಅನುಕೂಲವಾಗುವಂತೆ ಸುಂದರವಾದ ವಿನ್ಯಾಸದಲ್ಲಿರುವ ಪ್ರಸಕ್ತ ಮುದ್ರಣದ ಅನುಬಂಧದಲ್ಲಿ ಮೂಲಶ್ಲೋಕಗಳ ಅಕಾರಾದಿ ಸೂಚಿ, ಪದ ಸೂಚಿ, ಹಾಗೂ ವ್ಯಾಖ್ಯಾನದಲ್ಲಿ ಉದ್ಧೃತವಾಗಿರುವ ವಚನಗಳ ಅಕಾರಾದಿ ಸೂಚಿಯೂ ಇದೆ.

ಸತ್ವ-ತತ್ತ್ವಗಳಿಂದ ಹಿರಿದಾದ ಈ ಗ್ರಂಥದ ಅಧ್ಯಯನ-ಅಧ್ಯಾಪನ ಚಿತ್ತ-ಮನ-ಭಾವ-ಬುದ್ಧಿಗಳಿಗೆ ಸಂಸ್ಕಾರವನ್ನೊದಗಿಸುವ ಜೊತೆಗೆ ಆತ್ಮವಿಕಸನಕ್ಕೂ ಪ್ರೇರಣೆ ನೀಡಬಲ್ಲವು. ಇಂತಹ ಮೌಲಿಕ ಆಧ್ಯಾತ್ಮಿಕ ಗ್ರಂಥ ಕನ್ನಡ ಬಲ್ಲ ಎಲ್ಲ ಸಾಧಕರೂ ಸಂಗ್ರಹಿಸಲೇ ಬೇಕಾದ ಅಮೂಲ್ಯ ನಿಧಿ.

— ವಿಜಯಕುಮಾರ

## ಬಲ್ಲವರದಾರು?

ಏನಿಲ್ಲ! ಏನಿಲ್ಲವೆಂಬುದೂ ಅಲ್ಲಿಲ್ಲ!
ಏನದೆಂಬುದನರಿವರಾರೊಬ್ಬರೂ ಇಲ್ಲ!
ಕರಿದಿಲ್ಲ: ಬಿಳಿದಿಲ್ಲ; ದಿನವಿಲ್ಲ; ನಿಶೆಯಿಲ್ಲ
ಅರಿವಿಲ್ಲ; ಮನವಿಲ್ಲ; ಅಳಿವಿಲ್ಲ; ಉಳಿವಿಲ್ಲ;
ಶೂನ್ಯಮಲ್ಲವು! ಸರ್ವವೂ 'ನೇತಿ' 'ನೇತಿ'!
ಕಾಲದೇಶಗಳಿಲ್ಲ! ಸಾವು ಬಾಳುಗಳಿಲ್ಲ!
ನಾನಿಲ್ಲ; ನೀನಿಲ್ಲ ; ಸರ್ವವೂ, ಮೌನ!
ತಿಮಿರ ಬೆಳಕಿನೊಳಡಗಿ, ಬೆಳಕು ತಿಮಿರದೊಳವಿತು,
ಭಾವ ಶೂನ್ಯವ ಸೇರಿದುದು ಐಕ್ಯಮಾಗಿ!
ರವಿಯಿಲ್ಲ; ಶಶಿಯಿಲ್ಲ; ನಭವಿಲ್ಲ; ಧರೆಯಿಲ್ಲ;
ರಂಜಿಸುವ ಉಡುಗಣದ ಸೌಂದರ್ಯವಿಲ್ಲ!
ತುದಿಯಿಲ್ಲ; ಮೊದಲಿಲ್ಲ; ಒಂದಿಲ್ಲ; ಎರಡಿಲ್ಲ;
ಏನು ಏನಾಗಿರ್ದುದೋ ಬಲ್ಲವರದಾರು?
ಭಾವದೊಳಭಾವವೋ? ಶೂನ್ಯದೊಳಶೂನ್ಯವೋ?
ಅರಿವಿನಾಚೆಯ ತೀರ ಬರಿಮೌನ, ಮೌನ!
ಜ್ಞಾನತಾನಲ್ಲಿಲ್ಲ; ಜ್ಞೇಯಮದುಮಿಲ್ಲ;
ಜ್ಞಾನಜ್ಞೇಯಗಳೆಲ್ಲ ಜ್ಞಾತನೊಳು ಸೇರೆ
ಏನು ಏನಾಗಿರ್ದುದೋ ಬಲ್ಲವರದಾರು?

ಮೂಲ: ಸ್ವಾಮಿ ವಿವೇಕಾನಂದ, ಅನುವಾದ : ಕುವೆಂಪು